ಇ) ಕಾಮಗಾರಿಯನ್ನು ಎಂದು, ಯಾವಾಗ ಮುಗಿಸಲಾಗುವು?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಉಡುಪಿ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ದಿನಾಂಕ 30.3.1997ರಂದು ಪ್ರಾರಂಭಿಸಲಾಗಿದೆ. ಕ್ರೀಡಾಂಗಣದ ನೆಲ ಸಮ ತಟ್ಟುಗೊಳಿಸಲಾಗಿದೆ.

ಆ) ಇದುವರೆಗೆ ಸದರಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಜಿಲ್ಲಾ ಪಂಚಾಯತ್‌ನಿಂದ ರೂ.10.00 ಲಕ್ಷ ಬಿಡುಗಡೆ ಮಾಡಲಾಗಿದು, ಪ್ರಸ್ತುತ ಸಾಲಿನಲ್ಲಿ ವಿನಿಯೋಗಿಸಲಾಗುವುದು.

ಇ) ಸಾರ್ವಜನಿಕ ವಂತಿಗೆ ಸಂಗ್ರಹ ಹಾಗೂ ಕೇಂದ್ರ ಸರ್ಕಾರದ ಅನುದಾನ ಪಡೆದು ಆದಷ್ಟು ಬೇಗ ಕ್ರೀಡಾಂಗಣ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸಿ ಕೇಂದ್ರಗಳು.

1688 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರವಾಸೋದ್ಯಮ,ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳಾಗಿ ಮಾಡಲಾಗಿದೆ? (ವಿವರ ನೀಡುವುದು)

ಆ) ಈ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರವು ನೀಡಿರುವ ಸವಲತ್ತುಗಳು ಏನು? (ಮಾಹಿತಿ ನೀಡುವುದು)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ,ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 1. ರಾಜ್ಯ ಸರ್ಕಾರವು ದಿನಾಂಕ 1-6-97ರಿಂದ ಜಾರಿಗೆ ತಂದಿರುವ ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಈ ಕೆಳಕಂಡ ಕೇಂದ್ರಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗುರ್ತಿಸಲಾಗಿದೆ.

1)	ಕಾರ್ಕಳ	15.	ಸೋಮೇಶ್ವರ
2.	ಮೂಡಬಿದರಿ	16.	ಕಟೀಲು
3.	ವಾರಂಗ	17.	ಪಿಲಿಕುಲ ನಿಸರ್ಗಧಾಮ
4.	ಉಡುಪಿ	18.	ಧರ್ಮಸ್ಥಳ
5.	ಮಲ್ಪೆ	19.	ವೇಣೂರು
6.	ಸೆಂಟ್‌ಮೆರೀಸ್ ಐಲಾಂಡ್	20.	ಶಿಶಿಲ
7.	ಕುಂದಾಪುರ	21.	ಜಮಲಾಬಾದ್
8.	ಮರವಂತೆ	22.	ಸುಬ್ರಮಣ್ಯ

9.	ಕೊಲ್ಲೂರು	23.	ಬೇಂದ್ರೆತೀರ್ಥ
10.	ಬೈಂದೂರು	24.	ಶಿರಾಡಿ
11.	ಅರಸಿನಗುಂಡಿ ಜಲಪಾತ	25.	ಉಪ್ಪಿನಂಗಡಿ
12.	ಸೂರತ್‌ಕಲ್	26.	ಅಮ್‌ತೂರ್
13.	ಪಣಂಬೂರು	27.	ಕಾಪು
14.	ಉಳ್ಳಾಲ	28.	ಮಣಿಪಾಲ್

2. ಮಂಗಳೂರು ನಗರ ಸಭೆ ಪರಿಮಿತಿ ಹೊರತುಪಡಿಸಿ ಹೈಟೈಡ್ ರೇಖೆಯಿಂದ ಒಂದು ಕಿ.ಮೀ ಅಗಲದ ಕಡಲು ತೀರ ಪ್ರದೇಶವನ್ನು "ಈ" ದರ್ಜೆಯಲ್ಲಿ ವಿಶೇಷ ಪ್ರವಾಸೋದ್ಯಮ ಪ್ರದೇಶವೆಂದು ವರ್ಗೀಕರಿಸಲಾಗಿದೆ.

ಆ) ಈ ಕೇಂದ್ರಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ 1.6.97ರಿಂದ ಸರ್ಕಾರವು ಜಾರಿಗೆ ತಂದಿರುವ ಪ್ರವಾಸೋದ್ಯಮ ನೀತಿಯಲ್ಲಿ ಬಂಡವಾಳ ಹೂಡಿಕೆ ಮೇಲೆ ಶೇಕಡ 10ರಿಂದ 35ರಷ್ಟು ಗರಿಷ್ಟ ರೂ.35.00 ಲಕ್ಷ (ಮೂವತ್ತೈದು ಲಕ್ಷ) ಸಬ್ಸಿಡಿ 3 ರಿಂದ 7 ವರ್ಷಗಳವರೆಗೆ ಮಾರಾಟ ತೆರಿಗೆ, ವಿಲಾಸಿ ತೆರಿಗೆ ಪಾವತಿಯಲ್ಲಿ ವಿನಾಯ್ತಿ ಸ್ಟ್ಯಾಂಪ್ ಶುಲ್ಕ ಪಾವತಿಯಲ್ಲಿ ವಿನಾಯ್ತಿ, ವಿದ್ಯುತ್ ಶುಲ್ಕ ಪಾವತಿಯಲ್ಲಿ ರಿಯಾಯಿತಿ, ನೊಂದಣಿ ಶುಲ್ಕ ಪಾವತಿಯಲ್ಲಿ ರಿಯಾಯಿತಿಗಳನ್ನು ನೀಡುವ ಮೂಲಕ ಖಾಸಗಿ ಉದ್ಯಮಿಗಳು ಪ್ರವಾಸೋದ್ಯಮ ಯೋಜನೆಗಳಲ್ಲಿ ಬಂಡವಾಳ ಹೂಡಲು ಪ್ರೋತ್ಸಾಹಿಸಲಾಗುತ್ತದೆ.

ಇಲಾಖೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯ ಹಾಗೂ ಕೇಂದ್ರ ನೆರವಿನಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಾಲಾಗಿದೆ. ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯ್ತಿ ವತಿಯಿಂದ ಕೈಗೊಳ್ಳಲಾಗಿದೆ.

ಲಕ್ಷ ರೂ.ಗಳಲ್ಲಿ

1.	ಉಳ್ಳಾಲ ಕಡಲುತೀರ ಅಭಿವೃದ್ಧಿ	-	4.00
2.	ಉಳ್ಳಾಲ ಕಡಲು ತೀರ ಕೂಡುರಸ್ತೆ	-	4.00
3.	ಉಳ್ಳಾಲ ಸಯ್ಯದ್ ಮದನಿ ದರ್ಗ ಕೂಡು ರಸ್ತೆ	-	8.00
4.	ಮರವಂತೆ ಕಡಲು ತೀರ ಅಭಿವೃದ್ಧಿ	-	5.00
5.	ಸೂರತ್ಕಲ್ ಕಡಲುತೀರ ಅಭಿವೃದ್ಧಿ	-	5.00
6.	ಸೂರತ್ಕಲ್ ಕಡಲುತೀರದಲ್ಲಿ ರಿಟ್ಯೆನಿಂಗ್ ಗೋಡೆ ನಿರ್ಮಿಸಲು	-	4.00
7.	ಸೂರತ್ಕಲ್ ಕಡಲುತೀರ ರಸ್ತೆ ಅಭಿವೃದ್ಧಿ	-	5.00

8.	ಮಲ್ಪೆ ಕಡಲುತೀರ ಕೂಡು ರಸ್ತೆ	-	5.00
9.	ಮಲ್ಪೆ ಕಡಲುತೀರ ಅಭಿವೃದ್ಧಿ	-	8.00
10.	ಸಿರೂರು ಕಡಲುತೀರ ಕೂಡು ರಸ್ತೆ	-	5.00
11.	ಪಿಲಿಕುಲ ನಿಸರ್ಗಧಾಮಕ್ಕೆ ಟಾಯ್‌ಟ್ರೈನ್ ಸೌಲಭ್ಯಕ್ಕಾಗಿ	-	5.00
12.	ವೇಣೂರು ಬಾಹುಬಲಿ ಕೂಡು ರಸ್ತೆ	-	2.50
13.	ಮಂಗಳೂರಿನಲ್ಲಿ ಪ್ರವಾಸಿ ಕಛೇರಿ ನಿರ್ಮಾಣ	-	20.00
14.	ಉಡುಪಿ, ಧರ್ಮಸ್ಥಳ ಉಳ್ಳಾಲದಲ್ಲಿ ಶೌಚಾಲಯ ನಿರ್ಮಾಣ	-	17.40
15.	ಉಡುಪಿಯಲ್ಲಿ ಯಾತ್ರಿನಿವಾಸ ನಿರ್ಮಾಣ	-	25.00
16.	ಮರವಂತೆಯಲ್ಲಿ ಯಾತ್ರಿನಿವಾಸ ನಿರ್ಮಾಣ	-	25.00
17.	ವಾಮಂಜೂರು - ಪಿಲಿಕುಲ ಕೂಡು ರಸ್ತೆ	-	5.00
18.	ಮುಡುಶೆಡ್ - ಪಿಲಿಕುಲ ಕೂಡು ರಸ್ತೆ	-	5.00

ದ.ಕನ್ನಡ ಜಿಲ್ಲೆಯಲ್ಲಿ ಕೋಳಿ ಮೊಟ್ಟೆ ಫಾರ್ಮಗಳ ಕುರಿತು

1689 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಳಿ ಮತ್ತು ಕೋಳಿ ಮೊಟ್ಟೆಗೆ ತುಂಬಾ ಬೇಡಿಕೆ ಇದ್ದು, ಉಡುಪಿಯಲ್ಲಿ ಕೋಳಿ ಮೊಟ್ಟೆ ಫಾರ್ಮ್‌ನ್ನು ಸರ್ಕಾರವು ತೆರೆಯಬೇಕೆಂಬ ಬೇಡಿಕೆ ಸಾರ್ವಜನಿಕರಿಂದ ಬಂದಿದ್ದು, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)

ಆ) ಈ ಬಗ್ಗೆ ದಾನಿಯೊಬ್ಬರು ಉಚಿತವಾಗಿ ನೀಡಿರುವ ಜಾಗವಿರುವುದರಿಂದ ಸರ್ಕಾರವು ಕೋಳಿ ಫಾರ್ಮನ್ನು ತೆರೆಯಲು ವಿಳಂಬ ಮಾಡುತ್ತಿರಲು ಕಾರಣಗಳೇನು? (ವಿವರ ನೀಡುವುದು)

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲಾಖೆಯಲ್ಲಿ ಕೋಳಿ ಮೊಟ್ಟೆ ಫಾರಂ ಅನ್ನು ಇಲಾಖೆಯಿಂದಲೇ ನಡೆಸುವ ಕಾರ್ಯಕ್ರಮ ಇಲ್ಲದೆ ಇರುವುದರಿಂದ ಸಾರ್ವಜನಿಕರಿಂದ ಬಂದಿರುವ ಬೇಡಿಕೆಯನ್ನು ಪರಿಗಣಿಸಲು ಸಾಧ್ಯವಾಗಿಲ್ಲ.

ಆ) ಉದ್ಭವಿಸುವುದಿಲ್ಲ.